ನನ್ನೇಣ್ತಿ ಕೋಳಿ ಮುದುರಿದ ಹಾಗೆ ಮುದುರಿದಳು. ಅಮ್ಮ ಈ ಸಾರಿ ಬರುವ ಕಣ್ಣೀರನ್ನ ತನ್ನ ಸೀರೆ ಸೆರಗಿಲೇ ಒತ್ತಿ ಹಿಡಿದಳು. 'ಸಾಕು ಮಕ್ಕರಿ ನೋಡೋಣ' ಅಂದ ಅಪ್ಪ. ನಾವು ಆತಂಕವನ್ನೊದ್ದುಕೊಂಡೇ ಮಲಗಿದೆವು.

* * *

ಕದ ತೆಗದು ದಿಕ್ಕತಪ್ಪಿ ಪಾರ್ವತಿ ಹುಲಿಯಿಂದ ತಪ್ಪಿಸಿಕೊಂಡವಳಂತೆ ಹೊರಗ ಮಕ್ಕಂಡಿದ್ದ ನಂತಾಕ ಓಡಿಬಂದಳು. ನನ ಕಾಲಿಡಕಂಡು 'ಯಲ್ಲಿಗಾದ್ರೂ ಹೋಗೊನ್ನಡಿ, ಉಪಾಸಬಿದ್ರ ಚಿಂತಿಲ್ಲ' ಅಂತ ಸರಬೋಸಿ ಅತ್ತಳು. ಅವನು ಅಲ್ಲೇ ಒಳಗಿನ ಕೋಣ್ಯಾಗ ಬರಿಮ್ಯೆಲೆ ನಾಲಿಗಿ ಸವರಿಕೋಂತ ಕುಂತಿದ್ದ. ಹೊರಗೆ ಸ್ವಲ್ಪ ಕತ್ತಲಿತ್ತು. ಆಗಲೇ ಬಲಿ ಕೊಡೋರು ಬಂದನಿಂತರು, ಮೊದಲು ಅಣ್ಣ-ಅಪ್ಪ ಮಾತ್ರ ನಮಸೆನೇಕ ಬಂದರು. ಅಮ್ಮ, ಮತ್ತು ಕೂಸನ್ನ ಕಂಕುಳದಲ್ಲಿ ಬಡಿದಕೊಂಡ ಅಣ್ಣನ ಹೆಂಡತಿ ಅಲ್ಲೆ ಬಾಗಿಲಲ್ಲೆ ನೋಡುತ್ತಾ ನಿಂತಿದ್ದರು.

ಅಪ್ಪ 'ಇರ್ಲ ತಗಳಮ್ಮ... ಆತನ್ನ ನೋಡಿದ್ರ ಫಸ್ಟಫಸ್ಟಿಗೆ ಅಂಜಿಕಿ ಬರುತ್ತ... ಮ್ಯೆಯಾಗ ದೇವರು ಇರೋರು ಹಂಗೆ ಕಾಣ್ತಾರ, ಆಮೇಲೆ ರೂಢಿ ಆಗುತ್ತ' ಅಂದ.

'ಮಾವ ನಾ ವಲ್ಲೆ, ನಾ ವಲ್ಲೆಂದ್ರ ವಲ್ಲೆ, ಎಲ್ಯಾದ್ರು ಎಂಟ್ರಲೆಣ್ಣೆ ಇದ್ರ ಕೊಟ್ಟಬಿಡ್ರೋ... ಕುಡದ ಮಕ್ಕಂಬಿಡತೀನಿ, ಇಂಥಾ ವನವಾಸ ನಾವಲ್ಲ್ಯಾ' ಅನ್ನುತ್ತಾ ಮಂಚದ ಕೋಡನ್ನು ಗಟ್ಟಿಗೆ ಹಿಡಿದು ಜಗೇಬಿದ್ದಳು.

'ಹಂಗಂದ್ರ ಯಂಗ? ಇಂಥಾ ವಂಶದ ಮರೇದಿನ ಹಾಳ ಮಾಡಕ ಬಂದಿಯೇನ... ನೆಡಿ ನೆಡಿ ಬೀಜದ ಮನುಷ್ಯ ದೇವರ ಸಮಾನ' ಅಂದು ಅಣ್ಣ ನನ್ನೇಣ್ತಿ ಬಲತೋಳಿಗೆ ಕೈ ಹಾಕಿ, ಮಂಚದಿಂದ ಬಿಡಿಸಲು ಪ್ರಯತ್ನಿಸಿದಾಗ ಅಣ್ಣನ ಕೈಯನ್ನು ಅಂಬುರ್ಸಿ ಕಡಿದುಬಿಟ್ಟಳು. ಅಣ್ಣನ ಸಿಟ್ಟು ನೆತ್ತಿಗೇರಿ ಕಪಾಳಕ ಒಂದೇಟು ಕೊಟ್ಟು, ಇನ್ನೊಂದೇಟು ಬೆನ್ನ ಎಮಿಕಿಗೆ ಗುದ್ದಿದ. ಗುದ್ದಿದ ರಭಸಕ್ಕೆ ನನ್ನೇಣ್ತಿಯ ಹಣೆ ಮಂಚದ ಕೋಡಿಗೆ ಬಡಿದು ಗೂಟೆ ಕಾತಿತು. 'ಕೊಲ್ರೊ... ಕೊಲ್ರಿ' ಅಂದು ನಡುಗಲು ಸುರುಮಾಡಿದಳು. ಎಷ್ಟು ಅಂಜಿಕೊಂಡಿದ್ದಳ ಅಂದ್ರ, ಕೊಲೆಗಾರನಿಂದ ತಪ್ಪಿಸಿಕೊಂಡವಳಂತೆ ಭಯಭೀತಳಾಗಿದ್ದಳು. ನಾನೇನು ಮಾಡಲಾರದ ಪರಿಸ್ಥಿತಿಯಲ್ಲಿ ಐದೀನಿ. ನನ್ನ ಮಾಡಿಕಂಡು ಬಹಳ ತಪ್ಪು ಮಾಡಿದೆ ಅಂತ ಅವಳಿಗೆ ಒಂದು ಕ್ಷಣ ಅನ್ನಿಸಿರಬೇಕು. ಅಷ್ಟು ಅಲವತ್ತು ಬೇಡಿಕೊಂಡರೂ ಬಿಡಲಿಲ್ಲ, ಈಸಾರಿ ಆ ಕಡೆ ಕೈ ಅಪ್ಪ, ಈ ಕಡೆ ಕೈ ಅಣ್ಣ ಮಂಚದ ಕೋಡಿನಿಂದ ಬಿಡಿಸಿಕೊಂಡು ಎಳದೊಯ್ಯುವಾಗ, ಅವಳು ಜಗೇಬಿದ್ದರೂ ಬಿಡಲಿಲ್ಲ. ಎಳೆದೊಯ್ಯುವಾಗ ಒಂದು ಬಾರಿ ನನ್ನ ಕಡೆ ಗೋಣು ತಿರುವಿ, ಹಲ್ಲು ಕಟಕಟ ಕಡೆಯುತ್ತಾ 'ಯಂಗ ಕುಂತು ಎಷ್ಟು ಚೆಂದ ನೋಡತಿಯಲ್ಲಲೋ... ಊರ ಹಡಕಾ!!' ಅಂದಳು. ಇರಲಿ ಬಿಡು ಪಾಪ, ಸಿಟ್ಟಿನ್ಯಾಗ ಅಂದಿರತಾಳ ಅಂತ ನನಗಿ ಬಂದ ಕಣ್ಣೀರನ್ನ ಒರೆಸಿಕೊಂಡು ಕುಳಿತೆ. ಅತ್ತಿಗೆ ಅಳುವ ಕೂಸನ್ನು ಎತ್ತಿಕೊಂಡು ಅಮ್ಮನ ಹಿಂದೇನೆ ಮನೆ ಒಳಗೆ ಹೋದಳು.

ನನ್ನ ಕತೆ ಕೇಳುವ ನೀವೆಲ್ಲರೂ ನಾನು ಗೋಳಾಡೋದನ್ನು ಸ್ವಲ್ಪ ಸಹಿಸಿಗೋರಿ. ಏನ್ಮಾಡೋದರಿ, ಒಬ್ಬ ಗಂಡನೆದುರಿಗೆ ಹೇಣ್ತಿಗೆ ಅನ್ಯಾಯ ಆಗುತ್ತಂದ್ರ ಮನಸಿಗಿ ಹೆಂಗಾಗುತ್ತ ನೀವ ಯೋಚನಿ ಮಾಡ್ರಿ. ನನ್ನೇಣ್ತಿ ಕೈಮುಗಿದು ಬೇಡಿಕೋಂತಿರತಾಳ. ಆದರ ಅವನೇನು ಕರುಣಾಮಯಿ ಅಲ್ಲಾರೀ, ಅವನು ಸಣ್ಣ ಮನುಷ್ಯಲ್ಲಾರೀ, ಎಂಬತ್ತರಿಂದ ತೊಂಬತ್ತು ಕೆಜಿ ಐದಾನ, ಅವಳ ಮ್ಯೆಮೇಲಿನ ಬಟ್ಟೆಯನ್ನ ಇಚ್ಛೆ ಬಂದಂಗ ಹರಿದಿರತಾನ್ರೀ, ಬತ್ತಲೆ ಮಾಡಿ ದೊಡ್ಡಬಂಡೆ ಮ್ಯೆಮೇಲೆ ಬಿದ್ದಂಗ ಬಿದ್ದಿರತಾನ. ನಾನು ಅವರ ಸನೇಪು ಹೋಗಿ ನಿಂತಗೊಂಡು, ನನ್ನೇಣ್ತಿ ಭಂಗ ಮಾಡೋದು ಕೇಳಿಸಿಕೊಂಡರ ಮತ್ತೆ ಹೊಟ್ಟ್ಯಾಗ ಕಾರ ಕಲಿಸಿದಂಗ ಆಗಲ್ಲೇನ್ರಿ. ನಾ ಇಲ್ಲೇ ಇರತೀನಿ. ನಾನ ಹೋಗಲ್ಲ ನನಿಗಿ ಬಂದ ಪರಿಸ್ಥಿತಿ ಇನ್ನ್ಯಾಕ ಊರಾಗ ಯಾವ ಗಂಡಗ ಬರಬಾರದು ಅಂತ ದೇವರಿಗೆ ಕೈಮುಗಿತೀನಿ. ಯಾರಿಗಿ ಬರಬಾರದು, ಯಾರಿಗಿ ಬರಬಾರದು...

ಪಾರ್ವತಿ ತಲಿಗಿ ಬಡದು ಎಚ್ಚರ ಮಾಡಿ 'ಏನಾ ಕೋಡಿ, ಯಾರಿಗಿ ಬರಬಾರದು, ಯಾರಿಗಿ ಬರಬಾರದಂತ ನಿದ್ದಿಗೊಣ್ಣಾಗ ಕಳಬುರುಸಾಕತ್ತೀಯಿ' ಅಂದಳು. ಎಚ್ಚರಾದ್ರುನೂ ಕನಸಿನ ಭಯ ಇನ್ನಾ ಇತ್ತು.

* * *

ಅಮ್ಮಾ ಅಕ್ಕಿ ಕೇರಿಕೋಂತ 'ಮಲ್ಲಿ, ಬಸವನ ಜಯಂತಿ ಇನ್ನ ಒಂದ ತಿಂಗಳ ಉಳೀತು ನೋಡಪ್ಪ'